**ದಿನಾಂಕ: 21.02.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಐ ಕೆ ಹೆಚ್ ವಕೀಲರಿಂದಃ**

ಆರೋಪಿ ನಮ್ಮ ಜಮೀನಿನ ಪಕ್ಕದವರ ಜಮೀನಿಗೆ ಕೆಲಸಕ್ಕ ಬರುತ್ತಿದ್ದ ಕಾರಣ ನನಗೆ ಪರಿಚಯಸ್ಥರು. ಅವರು ತೋಟದ ಕೆಲಸಕ್ಕೆ ಬರುತ್ತಿದ್ದರು. ಕೂಲಿ ಕೆಲಸಕ್ಕೆ ಬರುವ ಹೆಣ್ಣು ಮಕ್ಕಳಿಗೆ ದಿನಕ್ಕೆ ರೂ. 300 ಕೊಡುತ್ತಾರೆ. ಆರೋಪಿ ಶಬ್ಬೀರ ಎಂಬುವವರ ಜಮೀನಿಗೆ ಕೂಲಿ ಕೆಲಸಕ್ಕೆ ಬರುತ್ತಿದ್ದರು. ಆರೋಪಿ ಎಂದೂ ಸಹ ಕೂಲಿ ಕೆಲಸಕ್ಕೆ ಬರುವುದಿಲ್ಲ ಮನೆಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಆರೋಪಿಯ ಎಂದು ಕೂಲಿ ಕೆಲಸಕ್ಕೆ ಬರುತ್ತಿದ್ದರು ಎಂದು ಪುನಃ ನುಡಿಯುತ್ತಾರೆ. ನಾನು ಆರೋಪಿಗೆ ರೂ. 5 ಲಕ್ಷ 25 ಸಾವಿರ ಹಣವನ್ನು ಕೊಟ್ಟೆನು. ಹಣವನ್ನು ನಾನು ಆರೋಪಿಗೆ ಕಾಮನಹಳ್ಳಿಯಲ್ಲಿರುವ ನಮ್ಮ ಮನೆಯಲ್ಲಿಯೇ ಕೊಟ್ಟೆನು. ನಾನು ಹಣ ಕೊಟ್ಟಾಗ ಆರೋಪಿ ಮತ್ತು ಅವರ ತಂದೆ ಇದ್ದರು. ನಾನು ಆರೋಪಿಗೆ ಹಣ ಕೊಟ್ಟಾಗ ಯಾವುದೇ ದಾಖಲೆಗಳನ್ನು ಮಾಡಿಸಿಕೊಂಡಿರುವುದಿಲ್ಲ. ಆ ಹಣವನ್ನು ನಾನು ಆರೋಪಿಯ ತಂದೆಯ ಕೈಗೆ ಕೊಟ್ಟೆನು. ಆರೋಪಿ ತಂದೆಯ ಹೆಸರು ಹಜರತ್ ಅಲಿ ಬಾಳಿಂಬೀಡ ಆಗಿರುತ್ತದೆ. ನಾನು ರೂ. 500 ಮುಖ ಬೆಲೆಯ 1050 ನೋಟುಗಳನ್ನು ಕೊಟ್ಟೆನು. ಆ ಹಣವನ್ನು ನಾನು ಕುರಿ ಮರಿಗಳನ್ನು ಮಾರಾಟ ಮಾಡಿ ಮನೆಯಲ್ಲಿಯೇ ಇಟ್ಟಿದ್ದ ಹಣವನ್ನು ಆರೋಪಿಗೆ ಕೊಟ್ಟೆನು. ನಾನು ಒಟ್ಟು 126 ಕುರಿಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಇಟ್ಟುಕೊಂಡಿದ್ದೇನು. ಆ ಕುರಿಗಳನ್ನು ನಾನು ಶಿಕಾರಿಪುರದಲ್ಲಿ ಇದ್ದ ಸಂದರ್ಭದಲ್ಲಿ ಕುರಿ ಮಾಂಸದ ವ್ಯಾಪಾರಿಗಳು ತೆಗೆದುಕೊಂಡು ಹೋದರು. ನಾನು ಒಂದು ಕುರಿ ಮರಿಗೆ ರೂ. 7500 ಬೆಲೆಗೆ ಮಾರಾಟ ಮಾಡಿದೇನು. ನಾನು ಕುರಿ ಮಾರಾಟ ಮಾಡಿದ ಬಗ್ಗೆ ಆತನಿಂದ ಬಿಲ್ ಪಡೆದುಕೊಂಡಿರುವುದಿಲ್ಲ. ಕುರಿ ಮಾಂಸದ ವ್ಯಾಪಾರಿಗಳು ಅತೀ ಹೆಚ್ಚು ಅಂದರೆ 2 ಕುರಿಗಳನ್ನು ಮಾತ್ರ ತೆಗೆದುಕೊಂಡು ಹೋಗುತ್ತಾರೆ ಅದಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೊಪಿಯ ತಂದೆ ಹಜರತ್ ಅಲಿ

ಬಾಳಂಬೀಡ ರವರ ಕೈಗೆ ಹಣವನ್ನು ಯಾವ ದಿನಾಂಕದಂದು ಕೊಟ್ಟೆನು ಎಂಬುದು ನನಗೆ ಈಗ ನೆನಪಿಲ್ಲ. ಅದೇ ರೀತಿ ತಿಂಗಳು ಮತ್ತು ದಿನಾಂಕವು ನನಗೆ ನೆನಪಿಲ್ಲ. ಆರೋಪಿ ನೀಡಿದ ಚೆಕ್ ನಂಬರ ನನಗೆ ಹೇಳಲು ಬರುವುದಿಲ್ಲ. ಆರೋಪಿ ಯಾವ ದಿನಾಂಕದಂದು ಚೆಕ್ ಕೊಟ್ಟರು ಎಂಬುದು ನನಗೆ ಈಗ ನೆನಪಿಲ್ಲ. ಆರೋಪಿ ಚೆಕ್ ನ ಮೇಲೆ ಸಹಿಯನ್ನು ಯಾವ ಬಾಷೆಯಲ್ಲಿ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿ ಪರದಾಶೀನ ಮಹಿಳೆ ಆಗಿರುವುದರಿಂದ ಹೊರಗಡೆ ಎಲ್ಲಿಯೂ ಸಹ ಓಡಾಡುವುದಿಲ್ಲ ಎಂದರೆ ಸರಿಯಲ್ಲ. ನಿಪಿ–1 ರಂತಹ ಚೆಕ್ ನ್ನು ಆರೋಪಿ ಕೊಟ್ಟರು. ಆ ಚೆಕ್ ನ್ನು ಆರೋಪಿ ನಮ್ಮ ಮನೆಯಲ್ಲಿಯೇ ಕೊಟ್ಟರು. ಚೆಕ್ ಮೇಲಿರುವ ಬರವಣಿಗೆಯನ್ನು ಆರೋಪಿಯೇ ಬರೆದು ಕೊಟ್ಟರು. ಆರೋಪಿಗೆ ಕನ್ನಡ, ಹಿಂದಿ ಮತ್ತು ಇಂಗ್ಲೀಷ್ ನ್ನು ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಉರ್ದು ಬಾಷೆಯನ್ನು ಹೊರತು ಪಡಿಸಿ ಬೇರೆ ಯಾವುದೇ ಬಾಷೆಗಳು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–1 ರ ಮೇಲಿರುವ ಅಕ್ಷರ ಯಾರ ಬರವಣಿಗೆಗಳು ಎಂದರೆ ನನಗೆ ಓದಲು ಬರೆಯಲು ಬರದೆ ಇರುವ ಕಾರಣ ನನಗೆ ಗೊತ್ತಿರುವುದಿಲ್ಲ. ನನಗೆ ನೀಲಪ್ಪ ಎಂಬುವವರ ಪರಿಚಯ ಇರುವುದಿಲ್ಲ. ನಮ್ಮ ಮನೆಯಲ್ಲಿರುವ ಸೋಲಾರ್ ಪ್ಲಾಂಟ್ ಆರೋಪಿಯ ಹೆಸರಿಗೆ ಬಂದಿದ್ದು ಅದನ್ನು ನಾನು ರೂ. 48 ಸಾವಿರ ಆರೋಪಿಗೆ ಹಣ ನೀಡಿ ಖರೀದಿಸಿರುತ್ತೇನೆ. ನಾನು ಮತ್ತು ಶ್ರೀ ಧರ್ಮಸ್ಥಳ ಗ್ರಾಮೀಣ ಬ್ಯಾಂಕ್ನ ಮ್ಯಾನೇಜರ್ ಕೂಡಿಕೊಂಡು ಆರೋಪಿಗೆ ಮಂಜೂರು ಆದ ಸೋಲಾರ್ ಪ್ಲಾಂಟ್ ನ್ನು ನೇರವಾಗಿ ನಮ್ಮ ಮನೆಗೆ ಹಾಕಿಸಿಕೊಂಡಿದ್ದೇವೆ ಎಂದರೆ ಸಾಕ್ಷಿಯು ನಾನು ಆರೋಪಿಗೆ ಹಣ ನೀಡಿ ಹಾಕಿಸಿಕೊಂಡಿರುತ್ತೇವೆ ಎಂದು ಸ್ವತಃ ನುಡಿಯುತ್ತಾರೆ. ನಾನು ಸೋಲಾರ್ ಪ್ಲಾಂಟ್ ನ ಹಣವನ್ನು ಆರೊಪಿಗೆ ಕೊಟ್ಟಿರುವುದಿಲ್ಲ ಇಂದಿಗೂ ಸಹ ಆ ಸೋಲಾರ್ ಪ್ಲಾಂಟ್ ಕಂತನ್ನು ಆರೋಪಿಯ ತಂದೆ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಆ ಸೋಲಾರ್ ಪ್ಲಾಂಟ್ ಗೆ ಸಂಬಂಧಪಟ್ಟಂತೆ ಇಲ್ಲಿಯವರೆಗೆ ರೂ. 62 ಸಾವಿರ ಕಂತಿನ ಹಣವನ್ನು ಆರೋಪಿಯ ತಂದೆಯವರೇ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸೋಲಾರ್ ಪ್ಲಾಂಟ್ ಗೆ ಸಂಬಂಧಪಟ್ಟಂತೆ ರೂ. 48 ಸಾವಿರ ಹಣವನ್ನು ಆರೋಪಿಗಾಗಲಿ ಅಥವಾ ಅವರ ತಂದೆಗಾಗಲಿ ನೀಡಿರುವುದಿಲ್ಲ ಈ ಬಗ್ಗೆ ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಹಣವನ್ನು ನೇರವಾಗಿ ಆರೋಪಿಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಆರೋಪಿ ಮತ್ತು ಅವರ ತಂದೆಯ ಸಮಕ್ಷಮ ಕೊಟ್ಟಿದ್ದೇನೆಂದು ಸ್ವತಃ ನುಡಿಯುತ್ತಾರೆ. ನಾನು ಆರೋಪಿಗೆ ಕಾನೂನು ರೀತಿ ಹಣ ಕೊಡದೇ ಇರುವುದರಿಂದ ಅದನ್ನು ವಸೂಲಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನೀಲಪ್ಪ ದೊಡ್ಡಮನಿಯವರಿಗೆ ನೀಡಿದ ಚೆಕ್ ನ್ನು ಪಡೆದುಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಅಕ್ಕಿ ಅಲೂರಿನ ಶೆಟ್ಟರ ಅಂಗಡಿಗೆ ಚೆಕ್ ಕೊಡುವಂತೆ ಹೇಳಿ ನೀಲಪ್ಪ ದೊಡ್ಡಮನಿಯವರಿಗೆ ಚೆಕ್ ನ್ನು ನಾನು ಪಡೆದುಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವ ದಿನಾಕದಂದು ನಮ್ಮ ವಕೀಲರ ಮೂಲಕ ಆರೋಪಿಗೆ ನೋಟಿಸು ನೀಡಿದ್ದೇನೆಂದು ನನಗೆ ಈಗ ನೆನಪಿಲ್ಲ. ಆ ನೋಟಿಸು ಆರೋಪಿಗೆ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆ ಕಾನೂನು ಬದ್ದ ನೋಟಿಸು ಆರೋಪಿಗೆ ತಲುಪಿಲ್ಲ ಎಂದರೆ ಸರಿಯಲ್ಲ. ಆರೋಪಿ ಅಕ್ಕಿ ಆಲೂರಿನ ವೀರಾಪುರ ಆಸ್ಪತ್ರೆಯಲ್ಲಿ ಗರ್ಭಕೋಶ ಶಸ್ತ್ರ ಚಿಕಿತ್ಸೆಗಾಗಿ ಹಣ ಪಡೆದುಕೊಂಡರು. ಈ ವಿಚಾರವನ್ನು ಆರೋಪಿಯ ತಂದೆ ನನಗೆ ತಿಳಿಸಿದರು. ನಾನು ಸರಕಾರದಿಂದ ಲೈಸನ್ಸ ಇಲ್ಲದೇ ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಎಂದೂ ಸಹ ತನ್ನ ತಂದೆಯ ಜೊತೆ ನಮ್ಮ ಮನೆಗೆ ಬಂದಿರುವುದಿಲ್ಲ ಮತ್ತು ಚೆಕ್ ಸಹ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗದೇ ಇರುವುದರಿಂದ ಆರೋಪಿ ನನಗೆ ಚೆಕ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆ ಹಣವನ್ನುಆರೋಪಿಯ ತಂದೆ ಹಜರತ್ ಅಲಿ ಬಾಳಂಬೀಡ ರವರಿಗೆ ನೀಡಿರುವುದರಿಂದ ಅದು ಕಾನೂನು ಬದ್ದ ಸಾಲ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ–1 ರಂತಹ ಚೆಕ್ ಕಾನೂನು ಬದ್ದವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಆರೋಪಿಗೆ ನನಗೆ ಯಾವುದೇ ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಆ ಕಾರಣ ಆರೋಪಿ ಯಾವುದೇ ಅಪರಾಧ ಎಸಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೆ ರೀತಿಯಿಂದ ಪರಿಚಯ ಇಲ್ಲ ಎಂದರೆ ಸರಿಯಲ್ಲ. ನಾನು

ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ

ಮತ್ತು ಜೆ.ಎಂ.ಎಫ್.ಸಿ, ಹಾನಗಲ್

**<u>ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್</u>**

**<u>ಸಿ.ಸಿ ನಂ./20</u>**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | | ಡಿಡಬ್ಲ್ಯೂ | |
| ತಂದೆ:ಗಂಡನ ಹೆಸರು | : | | | |
| ವಯಸ್ಸು | : | ವರ್ಷ | | |
| ಉದ್ಯೋಗ | : | | | |
| ವಾಸ ಸ್ಥಳ | : | | | |

**<u>ದಿನಾಂಕ:05.11.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ವಕೀಲರಿಂದಃ</u>**

.

**<u>ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ. ವಕೀಲರಿಂದಃ</u>**

.

**(ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್